ಇ) ಪೆರೇಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಉನ್ನತ ದರ್ಜೆಗೇರಿಸುವ ಆಲೋಚನೆ ಇರುವುದಿಲ್ಲ.

ಈ) ಬಂದಿದೆ.

ಉ) ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ ಕಾನೂನು ಇತ್ತೀಚೆಗೆ ಜಾರಿಗೆ ಬಂದಿದ್ದು, ಇದರನ್ವಯ ಚಿಕಿತ್ಸಾಲಯಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ಈ ಪಿಡುಗನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

183 ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲಾ ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸರ್ಕಾರಿ ದವಾಖಾನೆಗಳಲ್ಲಿ ಮಂಜೂರಾದ ಎಷ್ಟು ವೈದ್ಯರ ಹುದ್ದೆಗಳು ಖಾಲಿ ಇವೆ; ತಾಲ್ಲೂಕುವಾರು ವಿವರ ನೀಡುವುದು;

ಆ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಇ) ಹಾಸನ ಜಿಲ್ಲೆಯಲ್ಲಿರುವ ಆಶ್ವತ್ರೆಗಳಲ್ಲಿ ವೈದ್ಯೇತರ ಹುದ್ದೆಗಳೆಷ್ಟು (ಮತಕ್ಷೇತ್ರವಾರು ವಿವರ ನೀಡುವುದು);

ಈ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಡಿರುವ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿರುವ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು ಕೆಳಕಂಡಂತಿದೆ (ತಾಲ್ಲೂಕುವಾರು)

ಕ್ರ.ಸಂ.	ತಾಲ್ಲೂಕು	ಖಾಲಿ ಹುದ್ದೆ
1	ಹಾಸನ	09
2	ಸಕಲೇಶಪುರ	06
3	ಚನ್ನರಾಯಪಟ್ಟಣ	06
4	ಆಲೂರು	03

5	ಅರಸೀಕೆರೆ	09
6	ಅರಕಲಗೂಡು	10
7	ಬೇಲೂರು	07
8	ಹೊಳೆನರಸೀಪುರ	21
	ಒಟ್ಟು	**70**

ಆ)

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ.50.000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರವಳಿಕೆ ತಜ್ಞರಿಗೆ ರೂ.1.000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1.500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ:2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5.000 ಗೌರವ ಧನ ನೀಡಿ ರಿಟ್ಯೆನರ್‌ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1.000 ದಂತೆ ಗೌರವ ಧನ ನೀಡಲು

ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರು ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
5. ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ನಂತರ ಆದ್ಯತಾನುಸಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಇ) ಹಾಸನ ಜಿಲ್ಲೆಯಲ್ಲಿರುವ ಆಸ್ಪತ್ರೆಗಳಲ್ಲಿ 2135 ವೈದ್ಯೇತರ ಹುದ್ದೆಗಳು ಮಂಜೂರಾಗಿದ್ದು, 1581 ಕರ್ತವ್ಯ ನಿರ್ವಹಿಸುತ್ತಿದ್ದು, 776 ವೈದ್ಯೇತರ ಹುದ್ದೆಗಳು ಖಾಲಿ ಇವೆ.

ಮತಕ್ಷೇತ್ರವಾರು ವಿವರ ಕೆಳಕಂಡಂತಿವೆ.

ಕ್ರ. ಸಂ.	ಮತಕ್ಷೇತ್ರ	ಮಂಜೂರು	ಕಾರ್ಯನಿರತ	ಖಾಲಿ
1.	ಅರಕಲಗೂಡು	257	160	97
2.	ಅರಸೀಕೆರೆ	290	193	97
3.	ಬೇಲೂರು	282	181	101
4.	ಹೊಳೆನರಸೀಪುರ	387	249	138
5.	ಹಾಸನ	222	169	53
6.	ಶ್ರವಣಬೆಳಗೊಳ	349	216	133
7.	ಸಕಲೇಶಪುರ	348	191	157
	ಒಟ್ಟು	**2135**	**1359**	**776**

ಈ)

1. ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
2. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.
3. ಪ್ರಸ್ತುತ ಗ್ರೂಪ್-ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲ ಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಹೊಂದುವ ಬಗ್ಗೆ

508 ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳೆಷ್ಟು; ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಶಾಲೆಗಳೆಷ್ಟು; ಖಾಸಗಿ ಕಟ್ಟಡಗಳಲ್ಲಿ ನಡೆಸುತ್ತಿರುವ ಶಾಲೆಗಳೆಷ್ಟು; ಸ್ವಂತ ಕಟ್ಟಡಗಳನ್ನು ಹೊಂದಲು ಸರಕಾರ ಕ್ರಮ ಕೈಗೊಂಡಿದೆಯೇ; ಪೂರ್ಣ ಮಾಹಿತಿ ನೀಡುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಮೇಲುಕೋಟೆ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸರ್ಕಾರವು ಮಂಜೂರು ಮಾಡಿದ್ದು, ಕಾರ್ಯನಿರ್ವಹಿಸುತ್ತಿವೆ.